ರೈತ ಸಾಲ ಮನ್ನಾ ಯೋಜನೆ

2346 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಸಾಲ ಮನ್ನಾ ಯೋಜನೆ ಅನ್ವಯ ರೈತರಿಗೆ ದೊರೆಯುವ ರಿಯಾಯಿತಿಯನ್ನು ನೇಕಾರರಿಗೂ ವಿಸ್ತರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆಯೇ?

ಆ) ನೇಕಾರರ ಅಭಿವೃದ್ಧಿಗೆ ರಾಜ್ಯ ಸರ್ಕಾರ ಏನೇನು ಕ್ರಮ ಕೈಗೊಂಡಿದೆ.

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):

ಅ) ಕೇಂದ್ರ ಸರ್ಕಾರದ ಸಾಲ ಮನ್ನಾ ಯೋಜನೆಯು ಗ್ರಾಮೀಣ ಪ್ರದೇಶಗಳ ಕೈಮಗ್ಗ ನೇಕಾರರಿಗೂ ಅನ್ವಯಿಸುತ್ತದೆ.

ಆ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ನೇಕಾರರಿಗೆ ಒದಗಿಸಿರುವ ಸಹಾಯ ಸೌಲಭ್ಯಗಳು ಈ ಕೆಳಗಿನಂತಿವೆ.

1. ನೇಕಾರರಿಗೆ ವರ್ಷವಿಡೀ ಶೇಕಡ 100 ರಷ್ಟು ನೂಲು ಸರಬರಾಜು ಮಾಡುವುದು
2. ನೇಕಾರರಿಗೆ ಆಧುನಿಕ ಮಗ್ಗ ಮತ್ತು ಮಗ್ಗದ ಸಲಕರಣೆಗಳನ್ನು ಸಹಾಯಧನದ ದರದಲ್ಲಿ ಪೂರೈಸುವುದು.
3. ನೇಕಾರರು ನೇಯ್ದ ಶೇಕಡ 100 ರಷ್ಟು ಬಟ್ಟೆಯನ್ನು ತೆಗೆದುಕೊಂಡು ಅದಕ್ಕೆ ತಕ್ಕಂತೆ ಪರಿವರ್ತಿತ ದರವನ್ನು ಕೊಡುವುದು.
4. ನೇಕಾರರಿಗೆ ನೇಯ್ಗೆ ಪೂರ್ವ ಹಾಗೂ ನೇಯ್ಗೆ ನಂತರ ಸಂಸ್ಕರಣ ಸೌಲಭ್ಯಗಳನ್ನು ಒದಗಿಸುವುದು.
5. ನೇಕಾರರಿಗೆ ಅವರ ತಾಂತ್ರಿಕ ಕೌಶಲ್ಯತೆ ಹೆಚ್ಚಿಸಲು ತರಬೇತಿ ಕೊಡುವುದು.
6. ನೇಕಾರರು ನೇಯ್ದ ಬಟ್ಟೆಯನ್ನು ಮಾರಾಟ ಮಾಡುವುದು.
7. ವಸತಿಹೀನ ನೇಕಾರರಿಗೆ ವಸತಿ ಮತ್ತು ಕಾರ್ಯಾಗಾರ ಹಾಗೂ ಬರಿ ಕಾರ್ಯಾಗಾರಗಳನ್ನು ಒದಗಿಸುವುದು.
8. ನೇಕಾರರಿಗೆ ಮಿತವ್ಯಯ ಯೋಜನೆ ಮತ್ತು ವಿಮಾ ಯೋಜನೆ ಜಾರಿ ಮಾಡುವುದು.

ಹುಬ್ಬಳ್ಳಿ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರುಗಳ ಸಂಖ್ಯೆ

2331-ಶ್ರೀ ಪಿ.ಸಿ. ಸಿದ್ದನಗೌಡರ್(ಕಲಘಟಗಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ವೈದ್ಯರು ನರ್ಸ್‌ಗಳು ಹಾಗೂ ಖಾಲಿ ಇರುವ ಇತರ ಹುದ್ದೆಗಳು ಎಷ್ಟು(ಹುದ್ದೆವಾರು ವಿವರಗಳನ್ನೊದಗಿಸುವುದು)

ಆ) ಸಾರ್ವಜನಿಕ ಹಿತದೃಷ್ಟಿಯಿಂದ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಿ. ಪುಟ್ಟಸ್ವಾಮಿ ಗೌಡ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ)

ಪ್ರಾಧ್ಯಾಪಕರು	11
ಸಹಾಯಕರ ಪ್ರಾಧ್ಯಾಪಕರು	18
ಉಪನ್ಯಾಸಕರು	19